# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 558
**ಸದಸ್ಯರ ಹೆಸರು** : ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ
(ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸುವ ದಿನಾಂಕ** : 08.12.2023
**ಉತ್ತರಿಸುವ ಸಚಿವರು** : ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕನ್ನಡೇತರರಿಗೆ ಕನ್ನಡ ಕಲಿಸುವ ಉದ್ದೇಶದಿಂದ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಪ್ರಾರಂಭಿಸಿದ್ದರೂ, "ಕನ್ನಡ ನುಡಿ ಕಲಿಕೆ" ಯೋಜನೆಗೆ ಸರ್ಕಾರ ಅವಶ್ಯಕ ಅನುದಾನವನ್ನು ಇದುವರೆಗೂ ಒದಗಿಸದಿರುವುದರಿಂದ ಅದು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ.<br><br>ಮುಂದುವರೆದು, ಕನ್ನಡ ಅಭಿವೃದ್ಧಿ ಪ್ರಾಧಿಕಾರವು ಕನ್ನಡ ಕಲಿಕೆಗೆ ಆದ್ಯತೆ ನೀಡುತ್ತಾ ಬಂದಿದೆ. ವಿವಿಧ ಇಲಾಖೆ/ ಕೇಂದ್ರ ರಾಜ್ಯ ಸರ್ಕಾರ ಸ್ವಾಮ್ಯದ ಕಛೇರಿಗಳಲ್ಲಿ ಹಾಗೂ ಇತರೆ ಸಂಘಗಳ ಸಹಕಾರದಲ್ಲಿ ಆಸಕ್ತರಿರುವ ಅನ್ಯಭಾಷಿಕರಿಗೆ "ಕನ್ನಡ ಕಲಿಕಾ ತರಗತಿ"ಗಳನ್ನು ನಿರಂತರವಾಗಿ ನಡೆಸುತ್ತಾ ಬರುತ್ತಿದೆ. ಆಯವ್ಯಯದಲ್ಲಿ ಹಂಚಿಕೆ ಮಾಡುವ ಅನುದಾನದಲ್ಲಿ ಒಂದಿಷ್ಟು ಅನುದಾನವನ್ನು ಕನ್ನಡ ಕಲಿಕೆಗೆ ಮೀಸಲಿಡಲಾಗುತ್ತಿದೆ. ಕನ್ನಡ ಕಲಿಕೆಗೆ ಪೂರಕವಾಗಿ ವಿವಿಧ ವಿಡಿಯೋ ಪಠ್ಯಗಳನ್ನು ಅನ್ಯಭಾಷಿಕರು ಕನ್ನಡ ಕಲಿಯಲು ಅನುಕೂಲವಾಗಲು ಕ್ರಮವಹಿಸಲಾಗಿದೆ. ಈಗಾಗಲೇ ಲಭ್ಯವಿರುವ ಅನುದಾನದಲ್ಲಿ ಹತ್ತು (10) ವಿಡಿಯೋ ಪಠ್ಯಗಳನ್ನು ಸಿದ್ಧಪಡಿಸಿ ಪ್ರಾಧಿಕಾರದ ಜಾಲತಾಣದಲ್ಲಿ ಅಳವಡಿಸಲಾಗಿದೆ. ಕನ್ನಡ ಸ್ವಯಂ ಬೋಧನ ಶೀರ್ಷಿಕೆಯಡಿಯಲ್ಲಿ ಆರು (6) ಭಾಷೆಗಳಲ್ಲಿ ಕನ್ನಡ ಕಲಿಕಾ ಪುಸ್ತಕಗಳನ್ನು ಮುದ್ರಿಸಲಾಗಿರುತ್ತದೆ. ಇದನ್ನು ಸಹ ಅನುದಾನದ ಲಭ್ಯತೆಯ ಆಧಾರದ ಮೇಲೆ ಅವಶ್ಯಕ ಪುಸ್ತಕಗಳನ್ನು ಮರು ಮುದ್ರಿಸಿಕೊಳ್ಳಲಾಗುತ್ತಿದೆ. |
| (ಆ) | ಬಂದಿದ್ದಲ್ಲಿ, ಪ್ರಸ್ತುತ ಆರ್ಥಿಕ ವರ್ಷದಲ್ಲಿ ಸದರಿ "ಕನ್ನಡ ನುಡಿ ಕಲಿಕೆ" ಯೋಜನೆಗೆ ಸರ್ಕಾರ ಅವಶ್ಯಕ ಅನುದಾನವನ್ನು ಇದುವರೆಗೂ ಒದಗಿಸದೇ ಇರಲು ಕಾರಣಗಳೇನು; | ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ಪ್ರಸ್ತುತ ಆರ್ಥಿಕ ವರ್ಷದಲ್ಲಿ ಒಟ್ಟಾರೆಯಾಗಿ ಒದಗಿಸಿದ್ದ ಅನುದಾನದಲ್ಲಿ ಸುಮಾರು 12 ಸಂಸ್ಥೆಗಳಲ್ಲಿ ಅನ್ಯಭಾಷಿಕರಿಗೆ ಕನ್ನಡ ಕಲಿಕಾ ತರಗತಿಗಳನ್ನು ನಡೆಸಲು ಕ್ರಮವಹಿಸಲಾಗಿದೆ. |

| | | |
|---|---|---|
| (ಇ) | ಯಾವ ಕಾಲಮಿತಿಯೊಳಗೆ ಸದರಿ "ಕನ್ನಡ ನುಡಿ ಕಲಿಕೆ" ಯೋಜನೆಗೆ ಸರ್ಕಾರ ಅವಶ್ಯಕ ಅನುದಾನವನ್ನು ಬಿಡುಗಡೆಗೊಳಿಸುವುದು? | ಉದ್ಭವಿಸುವುದಿಲ್ಲ. |

**ಸಂಖ್ಯೆ**.ಕಸಂವಾ 137 ಕೆಓಎಲ್ ಆಕ 2023

**(ಶಿವರಾಜ್ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು